**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಕರ್ನಾಟಕ ರಾಜ್ಯ ವಿಕೇಂದ್ರೀಕರಣ, ಯೋಜನೆ ಮತ್ತು ಅಭಿವೃದ್ಧಿ ಸಮಿತಿಯನ್ನು ಪುನರ್ ರಚಿಸುವ ಕುರಿತು – ಆದೇಶ.

**ಓದಲಾಗಿದೆ:**

1. ಕರ್ನಾಟಕ ಪಂಚಾಯತ್ ರಾಜ್(ಎರಡನೇ ತಿದ್ದುಪಡಿ) ಅಧಿನಿಯಮ, 2015 ದಿನಾಂಕ: 31–12–2015.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 195 ಜಿಪಸ 2016, ಬೆಂಗಳೂರು, ದಿನಾಂಕ: 20–09–2016.

**ಪ್ರಸ್ತಾವನೆ:**

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015ಕ್ಕೆ ತಿದ್ದುಪಡಿ ತಂದಿದ್ದು, ಮೇಲೆ ಓದಲಾದ (1)ರಲ್ಲಿ 31ನೇ ಡಿಸೆಂಬರ್ 2015 ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ.

ಈ ತಿದ್ದುಪಡಿಯ ಪರಿಣಾಮವಾಗಿ ಪಂಚಾಯತಿಗಳು "ಗ್ರಾಮ ಸ್ವರಾಜ್" ಆಗಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವ ಸಲುವಾಗಿ ಸಂವಿಧಾನಾತ್ಮಕ ಆಜ್ಞೆಗಳನ್ನು ಬಲಪಡಿಸುವಿಕೆಯ ಪ್ರಕ್ರಿಯೆಯನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಸ್ಪಷ್ಟವಾದ ಬದ್ಧತೆಯನ್ನು ಹೊಂದಿರುತ್ತದೆ. ತಳಮಟ್ಟದ ವ್ಯವಸ್ಥೆಯನ್ನು ಬಲಪಡಿಸಲು ಜನವಸತಿ (Habitation Sabha) ಸಭೆಗಳ ಪರಿಕಲ್ಪನೆಯು ಇದರ ಪ್ರಮುಖ ಲಕ್ಷಣವಾಗಿರುತ್ತದೆ. ಯೋಜನಾ ಪ್ರಕ್ರಿಯೆಯು ತಳಮಟ್ಟದಿಂದ ಮೇಲ್ಮುಖವಾಗಿ (Bottom to top Approach) ರೂಪುಗೊಳ್ಳಬೇಕು ಮತ್ತು ಗ್ರಾಮಸಭೆಗಳಲ್ಲಿ ರೂಪಿಸಿದ ಯೋಜನೆಗಳು ರಾಜ್ಯದ ವಿಕೇಂದ್ರೀಕರಣ ಯೋಜನೆಯಲ್ಲಿ ಒಳಗೊಂಡಿರಬೇಕು, ಎಂಬುದು ಈ ತಿದ್ದುಪಡಿಯ ಪ್ರಮುಖ ಉದ್ದೇಶವಾಗಿದ್ದು, ಆದ್ದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 310–ಬಿ ಪ್ರಕಾರ ಸರ್ಕಾರವು ಆಯವ್ಯಯ ದಸ್ತಾವೇಜಿನೊಂದಿಗೆ ಮಂಡಿಸಬೇಕಾದ ಅಭಿವೃದ್ಧಿ ಯೋಜನೆಗಳು ಮತ್ತು ವಾರ್ಷಿಕ ಆರ್ಥಿಕ ಪುನರಾವಲೋಕನೆಯನ್ನು ರೂಪಿಸಲು ಸರ್ಕಾರವನ್ನು ಸಮರ್ಥಗೊಳಿಸುವುದಕ್ಕೆ ಕರ್ನಾಟಕ ರಾಜ್ಯ ವಿಕೇಂದ್ರೀಕರಣ, ಯೋಜನೆ ಮತ್ತು ಅಭಿವೃದ್ಧಿ ಸಮಿತಿಯನ್ನು ಮೇಲೆ ಓದಲಾದ (2)ರಲ್ಲಿ ದಿನಾಂಕ:20–09–2016ರ ಆದೇಶದಲ್ಲಿ ಸ್ಥಾಪಿಸಲಾಗಿತ್ತು.

ಪ್ರಸ್ತುತ, ಕರ್ನಾಟಕ ರಾಜ್ಯ ವಿಕೇಂದ್ರೀಕರಣ, ಯೋಜನೆ ಮತ್ತು ಅಭಿವೃದ್ಧಿ ಸಮಿತಿಯಲ್ಲಿ ಮುಂದುವರೆಸಬಹುದಾದ, ಬದಲಾವಣೆಯಾಗಬೇಕಾದ ಹಾಗೂ ನಾಮನಿರ್ದೇಶನವಾಗಬೇಕಾದ ಹುದ್ದೆಗಳ ಬಗ್ಗೆ ಸರ್ಕಾರವು ತೀರ್ಮಾನ ಕೈಗೊಂಡು ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಕರ್ನಾಟಕ ರಾಜ್ಯ ವಿಕೇಂದ್ರೀಕರಣ, ಯೋಜನೆ ಮತ್ತು ಅಭಿವೃದ್ಧಿ ಸಮಿತಿಯನ್ನು ಪುನರ್ ರಚಿಸಲು ಉದ್ದೇಶಿಸಿದ್ದು, ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 195 ಜಿಪಸ 2016, ಬೆಂಗಳೂರು, ದಿನಾಂಕ:03–09–2020**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ವಿಕೇಂದ್ರೀಕರಣ, ಯೋಜನೆ ಮತ್ತು ಅಭಿವೃದ್ಧಿ ಸಮಿತಿಯನ್ನು ಈ ಕೆಳಕಂಡಂತೆ ಪುನರ್ ರಚಿಸಿ ಆದೇಶಿಸಿದೆ.

| | | | |
|---|---|---|---|
| 1. | ಚೇರ್‌ಪರ್ಸನ್ | ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ. | ಶ್ರೀ ಬಿ.ಎಸ್. ಯಡಿಯೂರಪ್ಪ |
| 2. | ವೈಸ್‌ಚೇರ್ಮನ್ | 1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು | ಶ್ರೀ ಕೆ.ಎಸ್.ಈಶ್ವರಪ್ಪ |
| | | 2) ಹಣಕಾಸು ಸಚಿವರು | ಹಣಕಾಸು ಸಚಿವರು |
| | | 3) ಯೋಜನಾ ಸಚಿವರು | ಯೋಜನಾ ಸಚಿವರು |
| | | 4) ನಗರಾಭಿವೃದ್ಧಿ ಸಚಿವರು | ಶ್ರೀ ಬೈರತಿ ಬಸವರಾಜು |
| | | 5) ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ಕ್ಷೇತ್ರದಲ್ಲಿ ತಜ್ಞರಾದ ಒಬ್ಬರು ಸರ್ಕಾರೇತರ ಸದಸ್ಯರು. | ಶ್ರೀ ಪ್ರಮೋದ್ ಹೆಗಡೆ, ಯಲ್ಲಾಪುರ, ಉತ್ತರ ಕನ್ನಡ ಜಿಲ್ಲೆ. |
| 3. | ಸದಸ್ಯರು | 1) ಅಭಿವೃದ್ಧಿ ಆಯುಕ್ತರು ಹಾಗೂ ಅಪರ ಮುಖ್ಯ ಕಾರ್ಯದರ್ಶಿ. | ಶ್ರೀಮತಿ ವಂದಿತಾ ಶರ್ಮಾ, ಭಾ.ಆ.ಸೇ., |
| | | 2) ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. | ಶ್ರೀ ಎಲ್.ಕೆ.ಅತೀಕ್, ಭಾ.ಆ.ಸೇ., |
| | | 3) ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ. | ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ., |
| | | 4) ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ. | ಶ್ರೀ ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ., |
| | | 5) ಸ್ಥಳೀಯ ನಿಕಾಯಗಳನ್ನು ಪ್ರತಿನಿಧಿಸುವ ಇಬ್ಬರು ವಿಧಾನ ಪರಿಷತ್ ಸದಸ್ಯರು. | 1. ಶ್ರೀ ಕೋಟಾ ಶ್ರೀನಿವಾಸ ಪೂಜಾರಿ, ಮಾನ್ಯ ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು, ದಕ್ಷಿಣ ಕನ್ನಡ.<br>2. ಶ್ರೀ ಮಹಂತೇಶ ಕವಟಗಿ ಮಠ, ಬೆಳಗಾವಿ. |
| | | 6) ಎಂಟು ಸದಸ್ಯರು, ಅವರಲ್ಲಿ<br>a) ಜಿಲ್ಲಾ ಯೋಜನಾ ಸಮಿತಿಗಳ ಇಬ್ಬರು ಚೇರ್‌ಪರ್ಸನ್ ಅವರಲ್ಲಿ ರೆವಿನ್ಯೂ ವಿಭಾಗದಿಂದ ಒಬ್ಬರು ಇರತಕ್ಕದ್ದು. | 1. ಶ್ರೀ ಮಾಧುಸ್ವಾಮಿ, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವತಿ ಸಚಿವರು.<br>2. ಶ್ರೀ ಪ್ರಭು ಚವ್ಹಾಣ್, ಮಾನ್ಯ ಪಶುಸಂಗೋಪನೆ ಮತ್ತು ಹಜ್ ಸಚಿವರು. |
| | | b) ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗಳ ಇಬ್ಬರು ಚೇರ್‌ಪರ್ಸನ್ ಅವರಲ್ಲಿ ರೆವಿನ್ಯೂ ವಿಭಾಗದಿಂದ ಒಬ್ಬರು ಇರತಕ್ಕದ್ದು. | 1. ಶ್ರೀ ಸುನೀಲ್ ಕುಮಾರ್, ಮಾನ್ಯ ಶಾಸಕರು, ಕಾರ್ಕಳ.<br>2. ಶ್ರೀ ಸಿದ್ದುಸವದಿ, ಮಾನ್ಯ ಶಾಸಕರು, ತೇರದಾಳ ವಿಧಾನಸಭಾ ಕ್ಷೇತ್ರ. |
| | | c) ಗ್ರಾಮ ಪಂಚಾಯತಿಗಳ ಇಬ್ಬರು ಚೇರ್‌ಪರ್ಸನ್ ಅವರಲ್ಲಿ ರೆವಿನ್ಯೂ ವಿಭಾಗದಿಂದ ಒಬ್ಬರು ಇರತಕ್ಕದ್ದು. | 1. ಗ್ರಾಮ ಪಂಚಾಯಿತಿ ಚುನಾವಣೆ ನಂತರ ನಾಮ ನಿರ್ದೇಶನ ಮಾಡಲಾಗುವುದು.<br>2. ಗ್ರಾಮ ಪಂಚಾಯಿತಿ ಚುನಾವಣೆ ನಂತರ ನಾಮ ನಿರ್ದೇಶನ ಮಾಡಲಾಗುವುದು. |

| | | | |
|---|---|---|---|
| | | d) ನಗರ ಸ್ಥಳೀಯ ನಿಕಾಯಗಳ ಇಬ್ಬರು ಚೇರ್ ಪರ್ಸನ್: ನಗರ ಪಾಲಿಕೆಗಳನ್ನು ಪ್ರತಿನಿಧಿಸುವ ಒಬ್ಬರು ಸಿಟಿ ಮುನಿಸಿಪಾಲ್ ಕೌನ್ಸಿಲ್‌ಗಳನ್ನು ಪ್ರತಿನಿಧಿಸುವ ಒಬ್ಬರು ಅಥವಾ ಪಟ್ಟಣ ಪಂಚಾಯಿತಿಗಳನ್ನು ಪ್ರತಿನಿಧಿಸುವ ಒಬ್ಬರು ಮತ್ತು ಪಟ್ಟಣ ಮುನಿಸಿಪಾಲಿಟಿಗಳನ್ನು ಪ್ರತಿನಿಧಿಸುವ ಒಬ್ಬರುವ: ಪರಂತು ಎಂಟರಲ್ಲಿ ಕನಿಷ್ಠ ಒಬ್ಬರು ಮಹಿಳೆಯಾಗಿರತಕ್ಕದ್ದು. ಅನುಸೂಚಿತ ಜಾತಿಗಳಿಂದ ಒಬ್ಬರು ಪ್ರತಿನಿಧಿ, ಅನುಸೂಚಿತ ಪಂಗಡ ಒಬ್ಬರು ಪ್ರತಿನಿಧಿ, ಅಲ್ಪಸಂಖ್ಯಾತರ ಸಮುದಾಯವು ಒಳಗೊಂಡಂತೆ ಇತರೆ ಹಿಂದುಳಿದ ವರ್ಗಗಳ ಒಬ್ಬರು ಪ್ರತಿನಿಧಿ ಇರತಕ್ಕದ್ದು. | 1. ಶ್ರೀ ಅಜಯಕುಮಾರ, ಮೇಯರ್, ಮಹಾನಗರ ಪಾಲಿಕೆ, ದಾವಣಗೆರೆ.<br>2. ಶ್ರೀ ದಿವಾಕರ ಪಾಂಡೇಶ್ವರ, ಮೇಯರ್, ಮಹಾನಗರ ಪಾಲಿಕೆ, ಮಂಗಳೂರು. |
| | | e) ತಜ್ಞರಾಗಿರುವ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ, ಕೈಗಾರಿಕೆ, ಗ್ರಾಮೀಣ ಮತ್ತು ನಗರಾಭಿವೃದ್ಧಿ, ಲಿಂಗ ಸಂಬಂಧಿತ ವಿಷಯಗಳು (ಮಹಿಳೆಯಾಗಿರತಕ್ಕದ್ದು) ಮಕ್ಕಳ ಹಕ್ಕುಗಳು- ಮಕ್ಕಳ ಹಕ್ಕುಗಳ ಕಾರ್ಯಕರ್ತರು, ಆರ್ಥಿಕ, ಪಟ್ಟಣ ಮತ್ತು ಗ್ರಾಮ ಯೋಜನೆ ಮತ್ತು ಪರಿಸರ ಮತ್ತು ಜಲ ಸಂರಕ್ಷಣೆ ಈ ಕ್ಷೇತ್ರಗಳಿಂದ **ಸರ್ಕಾರವು ನಾಮ ನಿರ್ದೇಶನ ಮಾಡಿದ ಐವರು ವ್ಯಕ್ತಿಗಳು** | 1. ಶ್ರೀ ಸಿ.ನಾರಾಯಣ ಸ್ವಾಮಿ,<br>2. ಶ್ರೀ ಡಿ.ಆರ್.ಪಾಟೀಲ<br>3. ಶ್ರೀ ಜಿ.ಮರಿಸ್ವಾಮಿ, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ.<br>4. ಶ್ರೀ ವೆಂಕಟೇಶ್, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಕೋಲಾರ. |
| 4. | ಸದಸ್ಯ ಕಾರ್ಯದರ್ಶಿ | ಯೋಜನಾ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ ಅಥವಾ ಸರ್ಕಾರದ ಕಾರ್ಯದರ್ಶಿ. | ಶ್ರೀಮತಿ ಶಾಲಿನಿ ರಜನೀಶ್, ಭಾ.ಆ.ಸೇ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ. |

2) ಮೇಲೆ ತಿಳಿಸಿದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 310–ಬಿ ಯ ಉಪಪ್ರಕರಣ (3)ರಲ್ಲಿ ತಿಳಿಸಿದಂತೆ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ (2)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸರ್ಕಾರೇತರ ಸದಸ್ಯರ ಪದಾವಧಿಯು ಐದು ವರ್ಷಗಳಿಗೆ ಅಥವಾ ಮುಂದಿನ ಆದೇಶದವರೆಗೆ, ಎರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆಗಿರತಕ್ಕದ್ದು.

3) **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 310(ಬಿ)ಯ ಉಪ ಪ್ರಕರಣ (4)ರನ್ವಯ ಸಮಿತಿಯು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಪಿ.ಶಿವಶಂಕರ್)**
ನಿರ್ದೇಶಕರು(ಪಂಚಾಯತ್ ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
03/09/2020

**ಇವರಿಗೆ,**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ 500 ಪ್ರತಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಒದಗಿಸಲು.

**ಪ್ರತಿಯನ್ನು:**

1. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.

2. ಪ್ರಧಾನ ಮಹಾಲೇಖಪಾಲರು (ಜಿ&ಎಸ್.ಎಸ್.ಎ), ಕರ್ನಾಟಕ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಇ&ಆರ್‌ಎಸ್‌ಎ), ಕರ್ನಾಟಕ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು.
6. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳು.
7. ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ & ಸಾಂಖ್ಯಿಕ ಇಲಾಖೆ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರ ಆಪ್ತ ಕಾರ್ಯದರ್ಶಿಗಳು.
8. ಮಾನ್ಯ ಮುಜರಾಯಿ, ಮೀನುಗಾರಿಗೆ ಬಂದರು, ಮತ್ತು ಒಳನಾಡು ಜಲ ಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು.
9. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರ ಆಪ್ತ ಕಾರ್ಯದರ್ಶಿಗಳು.
10. ಮುಖ್ಯ ಸಚೇತಕರು, ಕರ್ನಾಟಕ ವಿಧಾನ ಪರಿಷತ್.
11. ಮಾನ್ಯ ಶಾಸಕರು, ಕಾರ್ಕಳ ಹಾಗೂ ತೇರದಾಳ ವಿಧಾನಸಭಾ ಕ್ಷೇತ್ರ.
12. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು.
13. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು.
14. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
15. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
16. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
17. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
18. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
19. ಶ್ರೀ ಪ್ರಮೋದ್ ಹೆಗಡೆ, ತಜ್ಞರು, ಯಲ್ಲಾಪುರ, ಉತ್ತರ ಕನ್ನಡ ಜಿಲ್ಲೆ.
20. ಎಲ್ಲಾ ಜಿಲ್ಲಾಧಿಕಾರಿಗಳಿಗೆ.
21. ಮೇಯರ್, ಮಹಾನಗರ ಪಾಲಿಕೆ, ದಾವಣಗೆರೆ/ಮಂಗಳೂರು.
22. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ.
23. ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ/ಕೋಲಾರ.
24. ಸಮಿತಿಯ ಎಲ್ಲಾ ಸದಸ್ಯರುಗಳಿಗೆ.
25. ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು/ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
26. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.